ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR

ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಾವಿರಾ/ಆಡಳಿತ/2026-27/790 ದಿನಾಂಕ: 21. 09. 2

# ಸುತ್ತೋಲೆ

ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂ:ಇಡಿ 156ಡಿಸಿಇ 2026 (ಇ) ಬೆಂಗಳೂರು, ದಿನಾಂಕ 10.9.2026(ಪ್ರತಿ ಲಗತ್ತಿಸಿದೆ)

***********

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಸಂಯೋಜಿತ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಉಲ್ಲೇಖಿತ ಪತ್ರದಲ್ಲಿ ಸರ್ಕಾರವು ನಿಯಮಾವಳಿಗಳನ್ನು ರಚಿಸಿ ನಿರ್ದೇಶನ ನೀಡಿದ್ದು. ಸದರಿ ನಿಯಮಾಳಿಗೊಳಪಟ್ಟು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಸಂಯೋಜಿತ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವಂತೆ ಸೂಚಿಸಲಾಗಿದೆ.

21/9

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಲಗತ್ತು:**

*. ಸರ್ಕಾರದ ಪತ್ರ ಮತ್ತು ಮಾರ್ಗಸೂಚಿಗಳು

**ಇವರಿಗೆ:**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎಲ್ಲಾ ಸಂಯೋಜಿತ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ: 134ರಂತೆ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವ ಬಗ್ಗೆ.

**ಓದಲಾಗಿದೆ:** 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ: 134.

*****

**ಪ್ರಸ್ತಾವನೆ:**

2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:134ರಲ್ಲಿ "ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ನಮ್ಮ ಸರ್ಕಾರವು ಉದ್ದೇಶಿಸಿದೆ" ಎಂದು ಘೋಷಿಸಲಾಗಿದೆ.

ಸದರಿ ಘೋಷಣೆಯ ಕುರಿತು ದಿನಾಂಕ: 22.04.2026 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣದಲ್ಲಿ ರಾಜ್ಯದ ವಿವಿಧ ವಿದ್ಯಾರ್ಥಿ ಸಂಘಟನೆಗಳ, ಅಧ್ಯಾಪಕ ವೃಂದದವರ ಹಾಗೂ ವಿವಿಧ ಖಾಸಗಿ/ಅನುದಾನಿತ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ವಿಸ್ತೃತವಾಗಿ ಸಭೆಯನ್ನು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ, ಯುವಜನತೆಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ಉದ್ದೇಶದಿಂದ, ಪ್ರಜಾಪ್ರಭುತ್ವದ ವ್ಯವಸ್ಥೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ವಿದ್ಯಾರ್ಥಿ ಸಂಘದ ಚುನಾವಣೆಗಳು ನಡೆಸುವುದು ಅವಶ್ಯವಿದ್ದು, ಚುನಾವಣಾ ಪ್ರಕ್ರಿಯೆ ಹೇಗಿರಬೇಕು ಎಂಬ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಪಾರದರ್ಶಕವಾಗಿ ಚುನಾವಣೆಗಳನ್ನು ನಡೆಸುವ ಕುರಿತು ಹಾಗೂ ಚುನಾವಣಾ ಪ್ರಕ್ರಿಯೆಗಳ ಕುರಿತು ಅಭಿಪ್ರಾಯ ಸ್ವೀಕೃತವಾಗಿರುತ್ತದೆ.

ಯುವಜನತೆಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ಅವಶ್ಯಕತೆಯಿದ್ದು, ಪ್ರಜಾಪ್ರಭುತ್ವದ ವ್ಯವಸ್ಥೆಯ ಕುರಿತು ಎಲ್ಲರಿಗೂ ಅರಿವು ಇರಬೇಕು. ಇದರಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳಲಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವುದು ಅವಶ್ಯವಿರುತ್ತದೆ.

ಈ ಪ್ರಸ್ತಾವನೆಯ ಕುರಿತು ಸೂಕ್ತ ನಿರ್ಣಯಕ್ಕಾಗಿ ಸಚಿವ ಸಂಪುಟದ ಮುಂದೆ ಮಂಡಿಸಲು ಉನ್ನತ ಶಿಕ್ಷಣ ಇಲಾಖೆಯು ನಿರ್ಧರಿಸಲಾಗಿ, ದಿನಾಂಕ:09.09.2026ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

*"ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು, ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು **ಅನುಬಂಧ**ದಲ್ಲಿ ಸೂಚಿಸಲಾದ ವಿದ್ಯಾರ್ಥಿ ಸಂಘದ ಚುನಾವಣೆಯ ರೀತಿ-ನೀತಿ ಹಾಗೂ ನಿಯಮಾವಳಿಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಮತಿಸುವುದು"*

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 134ರಂತೆ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಅನುಮತಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 156 ಡಿಸಿಇ 2026(ಇ)**
**ಬೆಂಗಳೂರು, ದಿನಾಂಕ: 10.09.2026**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 134ರಂತೆ ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು, ಈ ಆದೇಶದ **ಅನುಬಂಧ**ದಲ್ಲಿ ವಿವರಿಸಿರುವ ಚುನಾವಣೆಯ ರೀತಿ-ನೀತಿ ಹಾಗೂ ನಿಯಮಾವಳಿಗೊಳಪಟ್ಟು ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಸರ್ಕಾರವು ಅನುಮತಿಸಿ ಆದೇಶಿಸಿದೆ.

ಈ ಆದೇಶವನ್ನು ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ:ಸಿ 514/2026ರಲ್ಲಿ ಕೈಗೊಂಡ ತೀರ್ಮಾನದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ದಯಾನಂದ ಎಂ.) 10/9/26
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ಕಾಲೇಜು ಶಿಕ್ಷಣ & ಸಮನ್ವಯ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ ಮತ್ತು ಇ), (ಎ ಮತ್ತು ಎಸ್.ಎಸ್.ಎ) ಮತ್ತು (ಇ ಮತ್ತು ಆರ್.ಎಸ್.ಎ), ಬೆಂಗಳೂರು

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
6. Executive Director, KSHEC, ಬೆಂಗಳೂರು.
7. ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.
8. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು.
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) (ತಾಂತ್ರಿಕ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-1 & 2), (ಕಾಲೇಜು ಶಿಕ್ಷಣ & ಸಮನ್ವಯ), ಬಹುಮಹಡಿ ಕಟ್ಟಡ, ಬೆಂಗಳೂರು.
13. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

# ವಿದ್ಯಾರ್ಥಿ ಸಂಘದ ಚುನಾವಣೆಯ ರೀತಿ-ನೀತಿ ಹಾಗೂ ನಿಯಮಾವಳಿಗಳು

ಮೊದಲ ಹಂತದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ / ಅನುದಾನಿತ / ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸುವ ಮೂಲಕ ಚಾಲನೆ ನೀಡಲಾಗುವುದು. ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಯು ಕೆಳಕಂಡಂತೆ ಪದಾಧಿಕಾರಿಗಳನ್ನು ಹೊಂದಿರತಕ್ಕದ್ದು.

**ಪದಾಧಿಕಾರಿಗಳು:**

1. ಅಧ್ಯಕ್ಷರು – 01
2. ಉಪಾಧ್ಯಕ್ಷರು -02 ( 01 ಮಹಿಳೆ ಕಡ್ಡಾಯ)
3. ಪ್ರಧಾನ ಕಾರ್ಯದರ್ಶಿ – 01
4. ಜಂಟಿ ಕಾರ್ಯದರ್ಶಿ - 02 (01 - ಮಹಿಳೆ ಕಡ್ಡಾಯ)
5. ಕಾರ್ಯಕಾರಿ ಸಮಿತಿ ಸದಸ್ಯರು - 06 (02 - ಮಹಿಳೆಯರಿಗೆ ಮೀಸಲು)

1. ಕಾರ್ಯಕಾರಿ ಸಮಿತಿಯಲ್ಲಿ ಒಟ್ಟು 06 ಮಂದಿ ಸದಸ್ಯರಿದ್ದು, ಅದರಲ್ಲಿ ಎರಡು ಸ್ಥಾನಗಳು ಕಡ್ಡಾಯವಾಗಿ ಮಹಿಳಾ ಸದಸ್ಯರಿಗೆ ಮೀಸಲಿರತಕ್ಕದ್ದು.
2. ಸಹಶಿಕ್ಷಣ (Co-Education) ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯಮರಿಗೆ ಮೀಸಲಾತಿಯನ್ನು ಕಡ್ಡಾಯಗೊಳಿಸುವುದು.
3. ಅಧ್ಯಕ್ಷರು ಕಾರಣಾಂತಗಳಿಂದ ಕಾರ್ಯ ನಿರ್ವಹಿಸಲು ಆಗದೇ ಇದ್ದ ಸಂದರ್ಭದಲ್ಲಿ ಒಂದನೇ ಉಪಾಧ್ಯಕ್ಷರು ಅಧ್ಯಕ್ಷರ ಕಾರ್ಯನಿರ್ವಹಿಸುವುದು.
4. ಎರಡು ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಿ ಅತೀ ಹೆಚ್ಚು ಮತ ಪಡೆದವರನ್ನು ಒಂದನೇ ಉಪಾಧ್ಯಾಕ್ಷ ಸ್ಥಾನಕ್ಕೆ ಹಾಗೂ ಎರಡನೇ ಅತೀ ಹೆಚ್ಚು ಮತ ಪಡೆದ ಅಭ್ಯರ್ಥಿಯನ್ನು ಎರಡನೇ ಸ್ಥಾನಕ್ಕೆ ಆಯ್ಕೆ ಮಾಡುವುದು.
5. ಸಹ ಶಿಕ್ಷಣದ (Co-Education) ಕಾಲೇಜಿನಲ್ಲಿ ಎರಡನೇ ಉಪಾಧ್ಯಕ್ಷ ಸ್ಥಾನವನ್ನು ಕಡ್ಡಾಯವಾಗಿ ಮಹಿಳೆಗೆ ಮೀಸಲಿಡುವುದು.
6. ಕಾಲೇಜಿನ ಪ್ರತಿಯೊಂದು ತರಗತಿಗೆ (Section) ಒಬ್ಬರು ತರಗತಿ ಪ್ರತಿನಿಧಿ (Class Representative) ಇರುತ್ತಾರೆ.
7. ಕನಿಷ್ಠ 40 ವಿದ್ಯಾರ್ಥಿಗಳು ಇರುವ ತರಗತಿಗೆ (Section) ಒಬ್ಬರು ತರಗತಿ ಪ್ರತಿನಿಧಿ (Class Representative) ಇರಬೇಕು. ಒಂದು ವೇಳೆ 40 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇದ್ದಲ್ಲಿ, ಎರಡು ತರಗತಿಗಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಸರಾಸರಿ 40 ವಿದ್ಯಾರ್ಥಿಗಳಿಗೆ ಒಬ್ಬ ಪ್ರತಿನಿಧಿ (Class Representative) ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

8. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಗರಿಷ್ಠ 6 ತರಗತಿ ಪ್ರತಿನಿಧಿಗಳನ್ನು (Six Class Representatives) ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ನೇಮಿಸುವುದು.
9. ತರಗತಿ ಪ್ರತಿನಿಧಿ (Class Representative) ಚುನಾವಣೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಗಳು ಒಂದೇ ದಿನ ಏಕಕಾಲಕ್ಕೆ ನಡೆಯುವುದು.
10. 6 ಕ್ಕಿಂತ ಹೆಚ್ಚು ತರಗತಿ ಪ್ರತಿನಿಧಿಗಳಿದ್ದಲ್ಲಿ (ಉದಾಹರಣೆಗೆ 10) ಅವರಲ್ಲಿಯೇ ಕಾರ್ಯಕಾರಿ ಸಮಿತಿಯ ಆರು ಸ್ಥಾನಕ್ಕೆ ಆಂತರಿಕ ಚುನಾವಣೆ ಮೂಲಕ ಆಯ್ಕೆ ಮಾಡುವುದು.
11. ಅಧ್ಯಕ್ಷ (01), ಉಪಾಧ್ಯಕ್ಷ (02), ಪ್ರಧಾನ ಕಾರ್ಯದರ್ಶಿ (01) ಮತ್ತು ಜಂಟಿ ಕಾರ್ಯದರ್ಶಿ (02), ಸ್ಥಾನಕ್ಕೆ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಂದ ನೇರ ಚುನಾವಣೆ ನಡೆಯಲಿದೆ.
12. ಚುನಾಯಿತ ಕಾರ್ಯಕಾರಿ ಸಮಿತಿಯ ಅವಧಿ ಒಂದು ಶೈಕ್ಷಣಿಕ ವರ್ಷ ಇರುವುದು (ಎರಡು ಸೆಮಿಸ್ಟರ್ ಅವಧಿ).
13. ಉನ್ನತ ಶಿಕ್ಷಣ/ ಕಾಲೇಜು ಶಿಕ್ಷಣ/ ತಾಂತ್ರಿಕ ಶಿಕ್ಷಣ/ ವೈದ್ಯಕೀಯ ಶಿಕ್ಷಣ/ ಕೃಷಿ/ ಪಶುಸಂಗೋಪನೆ/ ತೋಟಗಾರಿಗೆ ಇಲಾಖೆಗಳ ವ್ಯಾಪ್ತಿಯ ಎಲ್ಲಾ ಸರ್ಕಾರಿ/ ಅನುದಾನಿತ/ ಖಾಸಗಿ ಕಾಲೇಜುಗಳು, ವಿಶ್ವವಿದ್ಯಾನಿಲಯಗಳ ಸಂಯೋಜಿತ ಕಾಲೇಜುಗಳಲ್ಲಿ ಕಡ್ಡಾಯವಾಗಿ ಚುನಾವಣೆಗಳನ್ನು ನಡೆಸತಕ್ಕದ್ದು.
14. ನಾಮಪತ್ರ ಸಲ್ಲಿಸುವಾಗ ಎಲ್ಲಾ ಉಮೇದುವಾರರು ಚುನಾವಣಾ ನೀತಿ ಸಂಹಿತೆ (Election Code of conduct) ಕುರಿತು ನಿಗಧಿತ ನಮೂನೆಯಲ್ಲಿರುವ ಘೋಷಣೆಯನ್ನು ಚುನಾವಣಾಧಿಕಾರಿಯ ಮುಂದೆ ಕಡ್ಡಾಯವಾಗಿ ಓದತಕ್ಕದ್ದು.
15. ಕಾಲೇಜಿನ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಶೈಕ್ಷಣಿಕ ವರ್ಷದ ಆರಂಭದ 5 ವಾರದೊಳಗೆ ಚುನಾವಣಾ ಪ್ರಕ್ರಿಯೆಯನ್ನು ಮುಗಿಸುವುದು.
16. ಚುನಾವಣಾ ಪ್ರಕ್ರಿಯೆಯು ಆರಂಭಗೊಂಡ ಹತ್ತು ದಿನಗಳೊಳಗೆ ಪೂರ್ಣಗೊಳ್ಳ ತಕ್ಕದ್ದು.
17. ಮೊದಲ ದಿನ ನಾಮಪತ್ರ ಸಲ್ಲಿಕೆ, ಎರಡನೆಯ ದಿನ ನಾಮಪತ್ರ ಪರಿಶೀಲನೆ, ಪಟ್ಟಿ ಪ್ರಕಟ, ಮೂರನೆಯ ದಿನ ನಾಮಪತ್ರ ಹಿಂತೆಗೆದುಕೊಳ್ಳುವುದು ಹಾಗೂ ಅಂತಿಮ ಪಟ್ಟಿ ಪ್ರಕಟ. ಉಳಿದ ನಾಲ್ಕು ದಿನ ಉಮೇದುವಾರರಿಂದ ಪ್ರಚಾರ.
18. ಎಂಟನೇ ದಿನ: ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಸಾಮೂಹಿಕ ಬಹಿರಂಗ ಪ್ರಚಾರಕ್ಕೆ ಅವಕಾಶ. ಪ್ರತಿ ಅಭ್ಯರ್ಥಿಗೂ ಮಾತನಾಡಲು / ಮತ ಕೋರಲು 15 ನಿಮಿಷ ಕಾಲಾವಕಾಶ.
19. ಪ್ರಚಾರದ ವೇಳೆ ಜಾತಿ/ ಧರ್ಮ ವಿಚಾರಗಳನ್ನು ಯಾವುದೇ ರೀತಿಯಲ್ಲಿ ಬಳಸುವಂತಿಲ್ಲ.

20. ಚುನಾವಣೆ ವೇಳೆ ಯಾವುದೇ ರೀತಿಯ Posters, Banners ಬಳಸುವಂತಿಲ್ಲ, A5 ಅಳತೆಯ ಕರಪತ್ರಗಳನ್ನು ಮುದ್ರಿಸಿ ಹಂಚಬಹುದು.
21. ಪ್ರಚಾರಕ್ಕಾಗಿ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳಬಹುದು. ಆದರೆ, ಪ್ರಚಾರದ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ದ್ವೇಷ, ಅಸೂಯೆ, ವೈರತ್ವ ಸೃಷ್ಟಿಸುವಂತಹ ಯಾವುದೇ ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು.
22. ಚುನಾವಣೆಗಳಲ್ಲಿ ಹಣ, ಅಧಿಕಾರದ ಪ್ರಭಾವವನ್ನು ಬಳಸಬಾರದು. ಯಾವುದೇ ಆಸೆ / ಆಮಿಷಗಳನ್ನು ಒಡ್ಡಬಾರದು. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನದ ಕುರಿತು ಅವರಿಗಿರುವ ಧ್ಯೇಯೋದ್ದೇಶಗಳು, ಕಾರ್ಯಯೋಜನೆಗಳು, ಇತ್ಯಾದಿಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಬಹುದು.
23. ಒಂಬತ್ತನೇ ದಿನ: ಮತದಾನವು ಬೆಳಗ್ಗೆ 11 ಗಂಟೆಗೆ ಆರಂಭಗೊಂಡು 3 ಗಂಟೆಗೆ ಮುಕ್ತಾಯಗೊಳ್ಳಲಿದೆ. ನಾಲ್ಕು ಗಂಟೆಗೆ ಮತ ಎಣಿಕೆ ಕಾರ್ಯ ಆರಂಭಗೊಂಡು 5 ಗಂಟೆ ವೇಳೆಗೆ ಫಲಿತಾಂಶ ಪ್ರಕಟಿಸುವುದು.
24. ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರು ತಮ್ಮ ಹಿಂದಿನ ವರ್ಷದ ತರಗತಿಯಲ್ಲಿ ಕನಿಷ್ಠ 75% ಹಾಜರಾತಿಯನ್ನು ಪಡೆದಿರತಕ್ಕದ್ದು. ಪದವಿಯ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿ ವಿನಾಯಿತಿ ಇರುತ್ತದೆ.
25. ಚುನಾವಣೆಗೆ ಸ್ಪರ್ಧಿಸಬಯಸುವ ಉಮೇದುವಾರರ ಹೆಸರು ಯಾವುದೇ ಅಪರಾದ ಪ್ರಕರಣದ ಆರೋಪಪಟ್ಟಿಯಲ್ಲಿ (Charge Sheet) ನಮೂದಾಗಿರಬಾರದು. ಪೊಲೀಸ್ ಠಾಣೆಯ ರೌಡಿ ಶೀಟರ್‌ನಲ್ಲಿ ಹೆಸರು ಇರಬಾರದು.
26. ವಿದ್ಯಾರ್ಥಿ ಸಂಘದ ಚುನಾವಣೆಗೆ ಸಂಬಂಧಿಸಿದಂತೆ, ಕಾಲೇಜುಗಳು ಯಾವ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿದೆಯೋ ಆ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಇವರ ನೇತೃತ್ವದಲ್ಲಿ ಒಂದು ಮೇಲ್ವಿಚಾರಣಾ ಸಮಿತಿ (Overseeing Committee) ಯನ್ನು ರಚಿಸುವುದು. ಈ ಮೇಲ್ವಿಚಾರಣಾ ಸಮಿತಿಯಲ್ಲಿ ಒಬ್ಬ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯವರು ಸದಸ್ಯರಾಗಿ ಕಾರ್ಯನಿರ್ವಹಿಸುವುದು.
27. ವಿದ್ಯಾರ್ಥಿ ಸಂಘದ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವವಾಗಬಹುದಾದ ಸಮಸ್ಯೆಗಳು, ದೂರುಗಳು, ಕುಂದುಕೊರತೆಗಳನ್ನು ನಿರ್ವಹಿಸಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ನೇತೃತ್ವದಲ್ಲಿ ಕೋಶಗಳನ್ನು (Cell) ರಚಿಸುವುದು.

28. ಪ್ರತಿ ಕಾಲೇಜಿನಲ್ಲಿ ಪ್ರಾಂಶುಪಾಲರು ಮತ್ತು 03 ಬೋಧಕರನ್ನು ಒಳಗೊಂಡಂತೆ ರಚಿಸಲಾಗುವ ಸಮಿತಿಗೆ ಚುನಾವಣಾ ನಂತರ ಖರ್ಚು ವೆಚ್ಚದ ವಿವರಗಳನ್ನು ಕಡ್ಡಾಯವಾಗಿ ಉಮೇದುವಾರರು ಸಲ್ಲಿಸಬೇಕು.
29. ಯಾವುದೇ ರಾಜಕೀಯ ಪಕ್ಷಗಳು/ ಸಂಘಟನೆಗಳು ಹಾಗೂ ಸಂಬಂಧಪಟ್ಟ ಕಾಲೇಜಿನ ವಿದ್ಯಾರ್ಥಿಗಳಲ್ಲದವರು ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗಿಯಾಗುವಂತಿಲ್ಲ.
30. ಅಭ್ಯರ್ಥಿಗಳು ಯಾವುದೇ ಸಂದರ್ಭದಲ್ಲಿ ನಿಯಮಾವಳಿಗಳನ್ನು ಮೀರಿ ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿದರೆ ಅಂತವರ ಉಮೇದುವಾರಿಕೆಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ರದ್ದುಗೊಳಿಸಬಹುದಾಗಿದೆ.
31. ಚುನಾವಣಾ ಕಾರ್ಯಕ್ಕೆ ಸಂಬಂಧಿಸಿದಂತೆ, ಮತ ಚೀಟಿಗಳ ಮುದ್ರಣಾ, ಮತ ಪಟ್ಟಿ, ಹಾಗೂ ಇನ್ನಿತರೆ ಸಾದಿಲ್ವಾರು ಚುನಾವಣಾ ವೆಚ್ಚಗಳಿಗೆ ಗರಿಷ್ಠ ರೂ. 20,000/- ಗಳನ್ನು ಮೀಸಲಿಡುವುದು ಹಾಗೂ ಖರ್ಚು ವೆಚ್ಚಗಳನ್ನು ಕಾಲೇಜಿನ ಖಾತೆಯಿಂದ ಭರಿಸುವುದು.

**<u>ಚುನಾಯಿತ ಪ್ರತಿನಿದಿಗಳ ಜವಾಬ್ದಾರಿಗಳು</u>**

**<u>ಅಧ್ಯಕ್ಷರು:</u>**

1. ವಾರ್ಷಿಕ ಮಹಾಸಭೆ (AGM) ಮತ್ತು ಕಾರ್ಯಕಾರಿ ಸಮಿತಿಯ ಸಭೆಗಳನ್ನು ಕರೆಸುವುದು ಮತ್ತು ಅಧ್ಯಕ್ಷತೆ ವಹಿಸುವುದು. ಸದರಿ ಸಭೆಗಳು ಸುಗಮವಾಗಿ ನಡೆಯುವಂತೆ ಖಚಿತಪಡಿಸಿಕೊಳ್ಳುವುದು.
2. ಇತರ ಪದಾಧಿಕಾರಿಗಳಾದ (ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ) ಕೆಲಸಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸಂಘದಲ್ಲಿ ಸೌಹಾರ್ದಯುತ ವಾತಾವರಣವನ್ನು ಕಾಪಾಡುವುದು.
3. ಸಭೆಗಳಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆದು ಪರ-ವಿರೋಧ ಮತಗಳು ಸಮಾನವಾಗಿದ್ದರೆ, ಅಂತಿಮ ತೀರ್ಮಾನಕ್ಕಾಗಿ ತಮ್ಮ ವಿಶೇಷ ಮತವನ್ನು (ನಿರ್ಣಾಯಕ ಮತ) ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.
4. ಕಾರ್ಯಕಾರಿ ಸಮಿತಿಯ ಉಳಿದ ಎಲ್ಲಾ ಸದಸ್ಯರುಗಳ ಕಾರ್ಯಗಳನ್ನು ಹಂಚಿಕೆ ಮಾಡುವುದು. ಅವರುಗಳ ಕಾರ್ಯನಿರ್ವಹಣೆಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಅವರಿಗೆ ಕಾಲಕಾಲಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು.

5. ಅನಿವಾರ್ಯ ಅಥವಾ ತುರ್ತು ಸಂದರ್ಭಗಳಲ್ಲಿ, ಸಂಘದ ಸಭೆಯನ್ನು ಕರೆಯಲು ಸಾಧ್ಯವಾಗದಿದ್ದಾಗ ಸ್ವತಂತ್ರವಾಗಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ.
6. ಸಭೆಯಲ್ಲಿ ಗೊಂದಲ ಉಂಟಾದಾಗ ಅಥವಾ ಕೋರಂ (ಸದಸ್ಯರ ಹಾಜರಾತಿ) ಕೊರತೆಯಾದಾಗ ಸಭೆಯನ್ನು ಮುಂದೂಡುವ ಅಧಿಕಾರವನ್ನು ಹೊಂದಿರುತ್ತಾರೆ.

**ಪ್ರಧಾನ ಕಾರ್ಯದರ್ಶಿ:**

1. ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಕಾರ್ಯಕಾರಿ ಸಮಿತಿ ಮತ್ತು ಸಾಮಾನ್ಯ ಸಭೆಗಳನ್ನು ಕರೆಯುವುದು. ಸಭಾ ಸೂಚನಾ ಪತ್ರಗಳಿಗೆ ಸಹಿ ಹಾಕಿ ಹೊರಡಿಸುವುದು.
2. ಸಭೆಯ ಕಾರ್ಯಸೂಚಿ (Agenda) ಸಿದ್ಧಪಡಿಸುವುದು ಮತ್ತು ಸಭೆಯಲ್ಲಿ ಕೈಗೊಂಡ ನಿರ್ಣಯಗಳ (Minutes) ಅಧಿಕೃತ ದಾಖಲೆಯನ್ನು ಇಟ್ಟುಕೊಳ್ಳುವುದು.
3. ಸಂಘದ ನಿಯಮಾವಳಿಗಳು (Bylaws) ಮತ್ತು ಸಂಘದ ಉದ್ದೇಶಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸುವುದು.
4. ಸಂಘದ ದೈನಂದಿನ ಚಟುವಟಿಕೆಗಳು ಹಾಗೂ ಆಡಳಿತವನ್ನು ಮುನ್ನಡೆಸುವುದು.
5. ಸಂಘದ ಸದಸ್ಯರ ಸಂಪೂರ್ಣ ಮಾಹಿತಿ, ಹೆಸರು ಮತ್ತು ವಿಳಾಸಗಳ ನೋಂದಣಿಯನ್ನು ನಿರ್ವಹಿಸುವುದು.
6. ಅಧ್ಯಕ್ಷರು ಸೂಚಿಸುವ ವಿದ್ಯಾರ್ಥಿ ಸಂಘಕ್ಕೆ ಸಂಬಂಧಿಸಿದ ಯಾವುದೇ ಇತರೆ ಕಾರ್ಯಗಳ ನಿರ್ವಹಣೆ.

**ಕಾರ್ಯಕಾರಿ ಸಮಿತಿ:**

1. ಚುನಾಯಿತ ಪ್ರತಿನಿದಿಗಳು ಶೈಕ್ಷಣಿಕ ಪ್ರಗತಿಗೆ ಆಧ್ಯತೆ ನೀಡುವುದು ಹಾಗೂ ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಕಾಲಕಾಲಕ್ಕೆ ಕಾಲೇಜಿನ ಆಡಳಿತ ಮಂಡಳಿಯ ಗಮನಕ್ಕೆ ತರುವುದು.
2. ಚುನಾಯಿತ ಕಾರ್ಯಕಾರಿ ಸಮಿತಿಯ ಸಭೆ ಕನಿಷ್ಠ ಪ್ರತಿ 02 ತಿಂಗಳಿಗೊಮ್ಮೆ ನಡೆಸತಕ್ಕದ್ದು.
3. ಸಂಬಂಧಪಟ್ಟ, ಕಾಲೇಜಿನ ಮುಖ್ಯಸ್ಥರು/ ಆಡಳಿತ ಮಂಡಳಿಯೊಂದಿಗೆ ಆಯೋಜಿಸಿ ಸಂವಿಧಾನದ ಆಶಯಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ, ವಿಷಯ ತಜ್ಞರನ್ನು ಕರೆಸಿ, ಕಾಲಕಾಲಕ್ಕೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

4. ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಒಪ್ಪಿಗೆ ಪಡೆದು, ಸಯಂ ಸೇವಕರಾಗಿ ಕಾರ್ಯ ನಿರ್ವಹಿಸುವುದು.
5. ಚುನಾಯಿತ ಸಮಿತಿಯು ಸಂಘದ ಕಾರ್ಯ ವೈಖರಿಯ ಬಗ್ಗೆ ಕಾಲೇಜಿನ ಆಡಳಿತ ಮಂಡಳಿಗೆ 03 ತಿಂಗಳಿಗೊಮ್ಮೆ ವರದಿ ಸಲ್ಲಿಸುವುದು.
6. ಚುನಾಯಿತ ವಿದ್ಯಾರ್ಥಿ ಸಂಘವು ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ, ಕ್ರೀಡೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಆದ್ಯತೆ ನೀಡಬೇಕು.
7. ವಿದಾರ್ಥಿ ಸಂಘಟನೆ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ತಮ್ಮ ನಾಯಕತ್ವ ವಿಕಸನಕ್ಕೆ ಅವಕಾಶ ಮಾಡಿಕೊಡಬೇಕು .
8. ಕಾಲೇಜು ಕ್ಯಾಂಪಸ್ ನಲ್ಲಿ ಮಾದಕ ವಸ್ತುಗಳ ನಿಯಂತ್ರಣಕ್ಕೆ ವಿದ್ಯಾರ್ಥಿ ಸಂಘವು ಅತ್ಯಂತ ಕಟ್ಟು ನಿಟ್ಟಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು.
9. ವಿದ್ಯಾರ್ಥಿ ಸಂಘವು ಕಾಲೇಜಿನ ಆಡಳಿತ ಮಂಡಳಿಯ ದೈನಂದಿನ/ ಆಡಳಿತಾತ್ಮಕ ವಿಚಾರಗಳಲ್ಲಿ ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡುವಂತಿಲ್ಲ.

**ವಿದ್ಯಾರ್ಥಿಗಳಿಗೆ ನೀತಿಸಂಹಿತೆ (Code of Conduct)**

1. ವಿದ್ಯಾರ್ಥಿ ಸಂಘಟನೆಗಳು ಯಾವುದೇ ಕಾರಣಕ್ಕೂ ಸಮಾಜ ವಿರೋಧಿ ಹಾಗೂ ಸಮಾಜಘಾತಕ ಶಕ್ತಿಗಳನ್ನು ವಿದ್ಯಾರ್ಥಿ ಸಂಘಟನೆಯ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತಿಲ್ಲ.
2. ವಿದ್ಯಾರ್ಥಿಗಳಲ್ಲಿ ದ್ವೇಷ, ಅಸೂಯೆ, ವೈರತ್ವ ಸೃಷ್ಟಿಸುವಂತಹ ಯಾವುದೇ ಸಂದರ್ಭಗಳಿಗೆ ಅವಕಾಶ ಮಾಡಿಕೊಡಬಾರದು.
3. ವಿದ್ಯಾರ್ಥಿ ಸಂಘಟನೆಯು ಯಾವುದೇ ಹಂತದಲ್ಲೂ ಕಾಲೇಜಿನ ಶೈಕ್ಷಣಿಕ ಪ್ರಗತಿಗೆ ಅಡ್ಡಿ ಉಂಟಾಗದಂತೆ ಎಚ್ಚರಿಕೆವಹಿಸುವುದು.
4. ಅನಗತ್ಯವಾಗಿ ವೈಯಕ್ತಿಕ ದ್ವೇಷ ಕಾರಣದಿಂದ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಯವರೊಂದಿಗೆ ಆಗಲಿ, ಕಾಲೇಜಿನ ಆಡಳಿತ ಮಂಡಳಿಯವರೊಂದಿಗೆ ಆಗಲಿ ಸಂಘರ್ಷಕ್ಕೆ ಎಡೆ ಮಾಡಿಕೊಡಬಾರದು.
5. ವಿದ್ಯಾರ್ಥಿಗಳ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಸೂಕ್ತವಾದ ವೇದಿಕೆಗಳಲ್ಲಿ ಪ್ರಸ್ತಾಪಿಸುವ ಮೂಲಕ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುವುದು.

6. ವಿದ್ಯಾರ್ಥಿಗಳ ಸಿದ್ಧಾಂತಗಳು ವಿಭಿನ್ನವಾಗಿದ್ದರೂ, ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಚರ್ಚೆ, ಸಂವಾದದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು.

7. ವಿಶ್ವವಿದ್ಯಾನಿಲಯದ ಹಂತದಲ್ಲಿ ಕುಲಸಚಿವರು (ಆಡಳಿತ) ಇವರ ನೇತೃತ್ವದಲ್ಲಿ ರಚಿಸಲಾದ ಮೇಲ್ವಿಚಾರಣಾ ಸಮಿತಿಯು (Overseeing Committee) ವಿದ್ಯಾರ್ಥಿ ಸಂಘಗಳು ಯಾವುದೇ ಸಂದರ್ಭದಲ್ಲಿ ನಿಯಮಾವಳಿಗಳನ್ನು ಮೀರಿ ನಡೆದುಕೊಂಡಲ್ಲಿ, ಕಾಲೇಜಿನ ಪ್ರಾಂಶುಪಾಲರ ಶಿಫಾರಸ್ಸಿನ ಮೇರೆಗೆ, ಅವುಗಳನ್ನು ರದ್ದುಗೊಳಿಸುವ / ನಿಷೇಧಿಸುವ ಅಥವಾ ಚುನಾಯಿತ ಸಂಘವನ್ನು ವಿಸರ್ಜಿಸುವ ನಿರ್ಧಾರವನ್ನು ಕೈಗೊಳ್ಳಬಹುದಾಗಿರುತ್ತದೆ.

8. ಒಂದು ವೇಳೆ ಚುನಾಯಿತ ಸಂಘವು ಒಂದು ವರ್ಷದೊಳಗೆ ರದ್ದಾದರೆ / ಅಸಿಂಧುಗೊಂಡರೆ ಅಂತಹ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಎಲ್ಲಾ ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು ನಮೂದಿಸಿ Lottery ಮುಖಾಂತರ ಅರ್ಹ ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ಸಂಘಕ್ಕೆ ಆಯ್ಕೆ ಮಾಡುವುದು.

******